ವಿಜಯ ಕರ್ನಾಟಕ C
ಮಂಗಳವಾರ 3 ಏಪ್ರಿಲ್ 2012, ಬೆಂಗಳೂರು
www.vijaykarnataka.com

ಅದೇನೇ ಪ್ರಕೃತಿ ಸಹಜ ಅಂತ ಅಂದುಕೊಂಡರೂ ಇವತ್ತು ಮನುಷ್ಯನ ಜೀವನ ನಿಂತಿರುವುದು ಉತ್ಪಾದನೆ ಮತ್ತು ಮಾರುಕಟ್ಟೆಯ ಮೇಲೆ. ಕೃಷಿಯನ್ನು ನಂಬಿಕೊಂಡ ರೈತನಿಂದ ಶುರುವಾಗಿ ಬಹುರಾಷ್ಟ್ರೀಯ ಕಂಪನಿಯ ಉದ್ಯೋಗದವರೆಗೆ ಎಲ್ಲವೂ ಲಾಭ ಹಾಗೂ ನಷ್ಟದ ನೆಲೆಯಲ್ಲೇ ಕೊನೆಗಾಣುತ್ತವೆ. ಇದರ ಹಿನ್ನೆಲೆಯಲ್ಲಿ ನಿತ್ಯದ ಬದುಕು, ನಂಬಿಕೆಗಳು ಹಾಗೂ ನಮ್ಮ ತಿಳಿವಳಿಕೆಗಳು ರೂಪುಗೊಳ್ಳುತ್ತವೆ, ಬಲವಾಗುತ್ತವೆ ಮತ್ತು ಬದಲಾಗುತ್ತವೆ. ಬಹುಶಃ ಇದು ಕುವೆಂಪು ವಿಶ್ವವಿದ್ಯಾನಿಲಯದ ಕೋಣೆಯಲ್ಲಿ ಕಾಣಿಸಿಕೊಂಡಿರುವ ಬದಲಾವಣೆಯ ಸಾರ ಇದ್ದಿರಬಹುದು. ಇದು ಕೊಂಚ 'ಅಕಾಡೆಮಿಕ್ ಚರ್ಚೆ'ಯ ವಿಚಾರವಾದರೂ ನಮ್ಮ ನಿಮ್ಮಂತಹ ಕೆಲವು ಯುವ ಮನಸ್ಸುಗಳು ಇದರ ಹಿಂದಿರುವುದರಿಂದ ಅವರನ್ನು ಇಲ್ಲಿಯವರೆಗೆ ಎಳೆದು ತರುವ ಪುಟ್ಟ ಪ್ರಯತ್ನ ಮಾಡಬೇಕಾಯಿತು ಅಷ್ಟೇ..!



ಯುವ ಗರ್ಜನೆ

# ಆಸ್ತಿಕತೆ ಕುರಿತು ಆಸ್ಥೆಯ ಅಧ್ಯಯನ

**ಕಾಳಜಿ ಇಲ್ಲವಾ..?**

ಹೀಗೊಂದು ಸಂಶೋಧನೆ ಶುರುವಾಗುವ ಮುನ್ನ ಅಕಾಡೆಮಿಕ್ ವಲಯದಲ್ಲಿ ಅತಂತ್ರರಾಗಿದ್ದ ಯುವಕರಿಗೆ ಬಾಲಗಂಗಾಧರ್ ಎಂಬ ಹಿರಿಯ ಜೀವಿ ತಮ್ಮ ಭಾಷಣದ ಮೂಲಕವೇ ಪರಿಚಯವಾದರು ಮತ್ತು ಒಂದು ಹಂತದಲ್ಲಿ ಅವರನ್ನು ತಮ್ಮೆಡೆಗೆ ಸೆಳೆದರು ಎಂದು ನೆನಪಿಸಿಕೊಳ್ಳುವವರಿದ್ದಾರೆ. ಕನ್ನಡದ ಹಿರಿಯ ಬುದ್ಧಿಜೀವಿಗಳ ಮಾತುಗಳಿಗೆ ಇವರ ನೇರ ಪ್ರಶ್ನೆಗಳು ಮತ್ತು ಖಂಡುತುಂಡಾದ ನಿಲುವುಗಳು ಅನೇಕರನ್ನು ಅದರಲ್ಲೂ ವಿಶ್ವವಿದ್ಯಾನಿಲಯಗಳಲ್ಲಿರುವ ಕಿರಿಯ ಸಂಶೋಧಕರನ್ನು ಸೆಳೆಯಲು ಸಾಧ್ಯವಾಗಿದೆ. ಇಲ್ಲಿರುವ ಒಂದೇ ತಕರಾರು ಏನೆಂದರೆ, ಬದಲಾದ ಕಾಲಮಾನದಲ್ಲಿ ಎಲ್ಲವೂ ಪ್ರಾಡಕ್ಟ್‌ಗಳಾಗಿರುವಾಗ ಮನುಕುಲದ ಭವಿಷ್ಯದ ಸಮಾಜ ವಿಜ್ಞಾನ ಎಂದೇ ಬಿಂಬಿಸಿಕೊಳ್ಳುತ್ತಿರುವ ಬಾಲಗಂಗಾಧರ್ ವಿಚಾರ ಕೂಡ ಉತ್ಪಾದನೆ ಆಗಬೇಕಾ? ಎಂಬುದು. ಅಕಸ್ಮಾತ್ ಉತ್ಪಾದನೆ ಅಲ್ಲದಿದ್ದರೆ ಮತ್ಯಾಕೆ ವಿದೇಶಿ ವಿಶ್ವವಿದ್ಯಾನಿಲಯದ ಹಣ ತರಬೇಕು ಎಂಬುದು? ನಮ್ಮದೇ ಸರಕಾರಕ್ಕೆ ಇದನ್ನು ನಮ್ಮ ಜನರ ಹಣದಲ್ಲಿ ಮುಂದುವರಿಸುವಷ್ಟು ಕಾಳಜಿ ಇಲ್ಲವಾ ಎಂಬುದು? ಹೀಗೆ ಇಂತಹ ಕೆಲವು ಪ್ರಶ್ನೆಗಳೂ ಇವತ್ತು ರಾಜ್ಯದ ಬಹುತೇಕ ವಿವಿಗಳ ಕ್ಯಾಂಪಸ್‌ಗಳಲ್ಲಿ ಕೇಳಿಬರುತ್ತಿವೆ...!

"ಸಂ-ಶೋಧನೆಗಿಳಿದ ಯುವ ಮನಸ್ಸುಗಳಿವು: **ಪ್ರವೀಣ ಟಿ.ಎಲ್, ಮಹೇಶ್ ಕುಮಾರ್ ಸಿ.ಎಸ್, ಸಂತೋಷ್ ಕುಮಾರ್ ಪಿ.ಕೆ, ಕವಿತಾ ಪಿ.ಎನ್, ಶಂಕರಪ್ಪ ಎನ್. ಎಸ್, ಶಿವಕುಮಾರ್ ಹಾಗೂ ಶಿಲ್ಪ ಕೆ. ಎಚ್**"

**ಪ್ರಶಾಂತ್ ಹುಲ್ಕೋಡ್** ಬೆಂಗಳೂರು

ಗಮನಿಸಿ ನೋಡಿ, ನೀವು ದೇವರನ್ನು ನಂಬುತ್ತೀರಾ? ಹೌದು ಅಥವಾ ಇಲ್ಲಾ...ಇರುವುದು ಎರಡೇ ಕೆಟಗರಿಯಾದ್ದರಿಂದ ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳಿ ಅಷ್ಟೆ!

ಆದರೆ ಇರುವ ಎರಡೂ ವಿಭಾಗಗಳನ್ನೂ ಹೊರತು ಪಡಿಸಿಯೂ ಹೊಸ ರೀತಿಯಲ್ಲಿ ಜನರ ನಂಬಿಕೆಗಳನ್ನು ಗಮನಿಸಬೇಕು ಎಂಬ ಮನಸ್ಸು ಇದೀಗ ಹುಟ್ಟಿಕೊಂಡಿದೆ. ನೀವು ದೇವರನ್ನು ನಂಬುತ್ತೀರಾದರೆ, ಯಾಕೆ ಅಂತಹದೊಂದು ನಂಬಿಕೆ ಬೆಳೆದು ಬಂದಿದೆ? ಅದಕ್ಕೆ ಇರಬಹುದಾದದ ಕಾರಣಗಳು ಏನು? ಎಂಬುದು ಇವರ ಹುಡುಕಾಟದ ಸಾರಾಂಶ.

ಹೌದು, ಇದೊಂತರಹದ ಹುಡುಕಾಟವೇ. ಈವರೆಗೆ ನಡೆದು ಕೊಂಡು ಬಂದ ಸಂಪ್ರದಾಯಗಳು, ಆ ಕುರಿತು ಪರ- ವಿರೋಧದ ಅಂಶಗಳನ್ನು ಪಟ್ಟಿ ಮಾಡುವ ಕೆಲಸ ಇಲ್ಲಾಗುತ್ತಿದೆ. ಜತೆಗೆ ಅದೇ ಪಟ್ಟಿಯಲ್ಲಿ ಈವರೆಗೂ ಇದ್ದ ವಿಚಾರಗಳನ್ನು ದಾಖಲೆ ಸಮೇತ ಬುಡಮೇಲು ಮಾಡುವ ಕೆಲಸ ಆರಂಭವಾಗಿದೆ. ಈ ಕೆಲಸಕ್ಕೆ ಇಳಿದಿರುವುದು ಕುವೆಂಪು ವಿವಿ ಕಾಂಕ್ರಿಟ್ ಕಟ್ಟಡದ ಒಳಗೆ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ' ಎಂಬ ಫಲಕ ತಗುಲಿಸಿಕೊಂಡಿರುವ ಪುಟ್ಟ ಕೊಠಡಿ. ಇಲ್ಲಿರುವುದು ಇನ್ನೂ ಮೂವತ್ತರ ಆಸುಪಾಸಿನಲ್ಲಿರುವ 'ಸಂ-ಶೋಧಕರ' ತಂಡ. ಇವರ ಬೆನ್ನಿಗೆ ಬೆಲ್ಜಿಯಂನ ಘೆಂಟ್ ವಿಶ್ವವಿದ್ಯಾನಿಲಯದ ಹಣ ಮತ್ತು ಎಸ್.ಎನ್. ಬಾಲಗಂಗಾಧರ್ ಎಂಬ ಹಿರಿಯ ಜೀವವೊಂದು ಕೆಲಸ ಮಾಡುತ್ತಿದೆ.

## ಏನಿದು ಸಂ-ಶೋಧನೆ?

ಇವರ ಕೆಲಸವನ್ನು ವಿವರಿಸುತ್ತಾ ಹೋದರೆ ಅನೇಕರಿಗೆ 'ಅನ್-ಇಂಟರೆಸ್ಟಿಂಗ್' ವಿಚಾರ ಅನ್ನಿಸಿಬಿಡಬಹುದು. ಯಾಕೆಂದರೆ ಶ್ರೀ ಸಾಮಾನ್ಯರ ಬದುಕನ್ನು ತಮ್ಮ ಸಮಾಜ ವಿಜ್ಞಾನದ ಕಣ್ಣಲ್ಲಿ ನೋಡುವ ಮತ್ತು ಅದಕ್ಕೆ ಕಾರಣ ಹುಡುಕುವ ಕೆಲಸವನ್ನು ಈ ಯುವ ಮನಸ್ಸುಗಳು ಶುರು ಮಾಡಿವೆ. ಅಂದ ಹಾಗೆ ಈ ಸಮಾಜ ವಿಜ್ಞಾನ ಏನು ಹೊಸ ವಿಚಾರ ಅಲ್ಲ. ಈಗಾಗಲೇ ನಮ್ಮ ಹಬ್ಬ ಹರಿದಿನಗಳಿಂದ ಹಿಡಿದು, ಪೂಜೆ ಪುನಸ್ಕಾರಗಳವರೆಗೆ ಎಲ್ಲದಕ್ಕೂ ವೈಜ್ಞಾನಿಕ ಕಾರಣವಿದೆ ಎಂಬುದನ್ನು ಈ ಸಮಾಜ ವಿಜ್ಞಾನ ವಿವರಿಸುತ್ತದೆ. ಅದರಲ್ಲೂ , ಜಾತಿ-ಧರ್ಮದಂತಹ ಸೂಕ್ಷ್ಮ ವಿಚಾರಗಳನ್ನೂ ಸಾಮಾಜಿಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಹಲವು ಲಕ್ಷ ಪುಟಗಳ ಸಂಶೋಧನೆಗಳು ಈಗಾಗಲೇ ಬಂದಿವೆ. ಹೀಗಿರುವಾಗ ಇವರು ಮಾಡಹೊರಟಿರುವುದು ಸಮಾಜ ವಿಜ್ಞಾನದ ರೂಢಿಗತ ತಿಳುವಳಿಕೆಗೆ ವಿರುದ್ಧವಾದದು ಅಂತ ಭಾಸವಾಗುತ್ತದೆ. ಜನ ಸಾಮಾನ್ಯರ ಆಚರಣೆ ಮತ್ತು ಸಂಪ್ರದಾಯಗಳ ಬಗ್ಗೆ ಹೊಸ ಆಲೋಚನೆಯೊಂದನ್ನು ಹುಟ್ಟು ಹಾಕಲು ಪ್ರಯತ್ನಿಸಬೇಕು ಎಂಬುದು ಇವರ ಸಂಶೋಧನೆಯ ಬಾಟಮ್ ಲೈನ್.

## ಸಾಧ್ಯನಾ? ಅಗತ್ಯನಾ?

ಹೀಗೆ ತಲೆಮಾರಿನಿಂದ ತಲೆಮಾರಿಗೆ ಸಾಗಿಕೊಂಡು ಬಂದ ನಂಬಿಕೆಗಳನ್ನು ತಿರಸ್ಕರಿಸಿ ತನ್ನದೇ ದೃಷ್ಟಿಕೋನದಲ್ಲಿ ನೋಡಲಾಗಿದೆ ಎಂಬ ಕಾರಣಕ್ಕೆ ಸಮಾಜ ವಿಜ್ಞಾನದ ಈವರೆಗಿನ ತಿಳುವಳಿಕೆ ಬಗ್ಗೆನೇ ಇವರಿಗೆ ತಕರಾರಿದೆ. ಬ್ರಿಟಿಷರು ಬಿಟ್ಟು ಹೋದ ಪರಿಕಲ್ಪನೆ ನೆಲೆಯಲ್ಲೇ ನಮ್ಮ ನೆಲದ ಗುಣವನ್ನು ಅರ್ಥಮಾಡಿಕೊಂಡು ವಿಚಾರ ಹೆಣೆಯಲಾಗಿದೆ ಎಂಬ ಭಿನ್ನ ದನಿ ಇವರಲ್ಲಿದೆ. ಸಹಜವಾಗಿಯೇ ಅಂತಹ ತಿಳಿವಳಿಕೆಗಳೂ ಕಾಲದಿಂದ ಕಾಲಕ್ಕೆ ಒಂದಷ್ಟು ಜನರ ನಂಬಿಕೆಗಳನ್ನು ಉಳಿಸಿಕೊಂಡೇ ಬಂದಿದೆ. ಹೀಗಿರುವಾಗ ಇವರ ಮಾತುಗಳು ಆರಂಭದಲ್ಲೇ ವಿವಾದಕ್ಕೆ ಕಾರಣವಾಗಿವೆ. ಅವೆಲ್ಲಾ ವಿಚಾರಗಳು ಇಲ್ಲಿ ಅಪ್ರಸ್ತುತ ಅಂತ ಅನ್ನಿಸುತ್ತವೆ.

ಹಾಗೆಯೇ ಹೀಗೊಂದು ಸಂಶೋಧನೆಯ ಅಗತ್ಯವೇನಿತ್ತು? ಎಂಬ ಕುರಿತು ತಕರಾರುಗಳಿವೆ. ಒಟ್ಟಿನಲ್ಲಿ ಹುಡುಕಾಟದ ಆರಂಭದಲ್ಲೇ ಹವಾ ಕಾಣಿಸಿಕೊಂಡಿದೆ. ಆದರೆ ಇವರು ಮಾಡುತ್ತಿರುವ ಕೆಲಸ ಸರೀನಾ? ತಪ್ಪಾ? ಎಂಬ ಬಗ್ಗೆ ತೀರ್ಮಾನಕ್ಕೆ ಬರಬೇಕಾದ ಅಗತ್ಯ ಇವತ್ತಿನದಲ್ಲ, 'ಕಾಲದ ಅಲೆಯಲ್ಲಿ ಎಲ್ಲವೂ ತೇಲಿ ಬರುತ್ತವೆ ಮತ್ತು ತೇಲಿ ಹೋಗುತ್ತವೆ. ಹೀಗಿರುವಾಗ ಹೊಸ ವಿಚಾರವೊಂದು ಇದೀಗ ಮೊಳೆತಿದೆ. ಇದು ಗಟ್ಟಿಯಾಗಿದ್ದರೆ ನಿಂತುಕೊಳ್ಳುತ್ತದೆ. ಇಲ್ಲದಿದ್ದರೆ ಕಾಲ ತೆರೆಮರೆಗೆ ಸರಿಸುತ್ತದೆ, ಚಿಂತೆ ಯಾಕೆ?' ಎಂಬುದು ಕೆಲವರ ಅನಿಸಿಕೆ. ಒಟ್ಟಿನಲ್ಲಿ ಕುವೆಂಪು ವಿವಿಯಲ್ಲಿ ನಡೆಯುತ್ತಿರುವ ಸಂಶೋಧನೆ ರಾಜ್ಯದ ಅಕಾಡೆಮಿಕ್ ವಲಯದಲ್ಲಿ ಗುರುತಿಸಿಕೊಂಡಿದೆ. ಇದರಿಂದ ಮುಂದೇನಾಗುತ್ತದೆ ಎಂಬುದಕ್ಕಿಂತ ಯುವ ಮನಸ್ಸುಗಳು ಕೊಂಚ ಸೀರಿಯಸ್ ಆಗಿ ಯೋಚಿಸಿದರೆ ವೈಯಕ್ತಿಕ ಸಾಧನೆ ಆಚೆಗೂ ಏನಾದರೊಂದು ಮಾಡಬಹುದು ಎಂಬುದನ್ನು ಇದು ಸೂಚಿಸುತ್ತದೆ.

'ಯುವ ಗರ್ಜನೆ' ಎಂಬುದು ಸಾಧಕರ ಪಟ್ಟಿ ಮಾತ್ರವೇ ಅಲ್ಲ, ವೈಯಕ್ತಿಕ ಸಾಧನೆಗಳು ಸಮಾಜದ ಭವಿಷ್ಯವನ್ನು ನಿರ್ಧರಿಸುವಂತಿರಬೇಕು ಎಂಬ ತಿಳಿವಳಿಕೆಗೆ ಬರಲು ಇದು ಪ್ರೇರಣೆಯಾಗಬೇಕು ಅಂತಿಲ್ಲ, ಆದರೆ ಅಂತಹದೊಂದು ಪಾಠವನ್ನು ಇಲ್ಲಿ ಕಲಿಯಬಹುದೇನೊ? ■

ಕನ್ನಡದಲ್ಲಿ ವಚನಗಳಿವೆ ಎಂಬುದು ಇವತ್ತಿನ ಜನರೇಶನ್‌ಗೆ ಗೊತ್ತಿದ್ದರೆ ಅದು ನಮ್ಮ ಪ್ರಾಥಮಿಕ ಶಿಕ್ಷಣದ ಯಶಸ್ಸು! ಈ ವಿಚಾರ ಬಿಡಿ, ಈ ವಚನ ಚಳವಳಿ ಜಾತಿ ವಿರೋಧಿ ಚಳವಳಿನಾ? ಹೀಗೊಂದು ಚರ್ಚೆ ಹಿಂದಿನಿಂದಲೂ ಇದೆ. ಆದರೆ ಸಿಎಸ್‌ಎಲ್‌ಸಿ ಸಂಶೋಧಕರ ಪ್ರಕಾರ ವಚನ ಚಳವಳಿ ಎಂಬುದು ಜಾತಿ ವಿರೋಧಿ ಚಳವಳಿ ಆಗಿರಲೇ ಇಲ್ಲ ಎಂಬುದು. ಇದಕ್ಕೆ ಇವರೇ ನೀಡುವ ಸಮಜಾಯಿಷಿಗಳಿವೆ. ಅದು ಹೌದಾ? ಅಲ್ಲವಾ? ಇಲ್ಲಿ ಅದರ ಅಗತ್ಯವಿಲ್ಲ, ಆದರೆ ಹೊಸ ವಿಚಾರ ಯಾಕೆ ವಿವಾದ ಹುಟ್ಟಿಸುತ್ತಿದೆ ಎಂಬುದಕ್ಕೆ ಇದು ಒಂದು ಉದಾಹರಣೆ ಅಷ್ಟೆ...



**ಕೋಟ್ ಕಾರ್ನರ್**

### ಉತ್ತರ ಹುಡುಕಬಹುದು...

'ಸಂಶೋಧನೆಯ ನಿಜವಾದ ಅರ್ಥ ಏನು ಎಂಬುದು ಇಲ್ಲಿಗೆ ಬಂದ ಮೇಲೆ ತಿಳಿದುಕೊಂಡೆವು. ಈವರೆಗಿನ ಸಿದ್ಧಮಾದರಿಯ ಸಂಶೊಧನಾ ವಿಧಾನಗಳನ್ನು ಬಿಟ್ಟು ಸಾಮಾಜಿಕ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರ ಹುಡುಕುವ ಕೆಲಸವನ್ನು ಹೀಗೂ ಮಾಡಬಹುದು ಎಂಬುದು ಗೊತ್ತಾಯಿತು. ಹಿಂದಿನವರು ಕಂಡುಕೊಂಡ ಉತ್ತರಗಳಲ್ಲಿನ ಸಮಸ್ಯೆಗಳಿಗೆ ಪರಿಹಾರಾತ್ಮಕ ಕೆಲಸ ಇಲ್ಲಾಗುತ್ತಿದೆ, ಅದು ಖುಷಿಯ ವಿಚಾರ'

**- ಪ್ರವೀಣ್ ಟಿ.ಎಲ್** ಸಂಶೋಧಕ, ಸಿಎಸ್‌ಎಲ್‌ಸಿ